ಪ್ರಸ್ತಾವ

೧೯೮೬ನೇ ಸಾಲಿನ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದ ಜಂಟಿ ಸಮಿತಿಯು ವರದಿ ಸಲ್ಲಿಸ ಕಾಲಾವಧಿಯಂ ವಿಸ್ತರಣೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಕಂದಾಯ ಮತ್ತು ಯೋಜನ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಪ್ರಸ್ತಾವನ್ನು ಮಂಡಿಸಲಂ ತಮ್ಮ ಅನುಮತಿಯನ್ನು ಕೋರುತ್ತೇನೆ. '೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ವರದಿಯನ್ನು ಒಪ್ಪಿಸಲು ೧೯೮೮ನೇ ಮೇ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸುವುದು''

ಅಧ್ಯಕ್ಷರು.—ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಪ್ರಸ್ತಾವ ಏನೆಂದರೆ, ''೧೯೮೬ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯು ವರದಿಯನ್ನು ಒಪ್ಪಿಸಲು ೧೯೮೮ನೇ ಮೇ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವರದಿ ಒಪ್ಪಿಸಲು ಕಾಲಾವಧಿಯನ್ನು ವಿಸ್ತರಿಸಲಾಯಿತು.

ಖಾಸಗೀ ಕಾರ್ಯಕಲಾಪಗಳು.

''ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆಯನ್ನು ವಿಕಾಏಕಿ ಏರಿಸುವುದನ್ನು ಕೈಬಿಡುವ ಕುರಿತು.''

ಅಧ್ಯಕ್ಷರು.—ಈಗ, ಖಾಸಗಿ ಕಾರ್ಯಕಲಾಪಗಳು. ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ತಮ್ಮ ನಿರ್ಣಯವನ್ನು ಮಂಡಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಈ ಕೆಳಗಿನ ನಿರ್ಣಯವನ್ನು ನಾನು ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಸೂಚಿಸುತ್ತೇನೆ.

''ಖಾದ್ಯ ತೈಲ, ಸಕ್ಕರೆ, ಉಕ್ಕು, ಪೆಟ್ರೋಲ್, ಇತ್ಯಾದಿ ಜನಬಳಕೆ ವಸ್ತುಗಳ ಬೆಲೆಗಳನ್ನು ವಿಕಾಏಕಿ ಕೇಂದ್ರ ಸರ್ಕಾರವು ಏರಿಸಿರುವುದನ್ನು ಕೈಬಿಡಬೇಕೆಂದು ಈ ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ,''

ಅಧ್ಯಕ್ಷರು.—ನಿರ್ಣಯವನ್ನು ಮಂಡಿಸಲಾಗಿದೆ. ನಿರ್ಣಯದ ಕುರಿತಂ ಮಾನ್ಯ ಸದಸ್ಯರು ಮಾತನಾಡಬಹುದು.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜೀನಗರ).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯವು ಅತ್ಯಂತ ಮುಖ್ಯವಾದಂಥ ನಿರ್ಣಯ ಎಂದು ನಾನು ಪರಿಗಣಿಸುತ್ತೇನೆ. ಇದರ ವ್ಯಾಪ್ತಿಯಂ ಕೇಂದ್ರ ಸರ್ಕಾರಕ್ಕೆ ಮಾತ್ರ ಅನ್ವಯಿಸತಕ್ಕಂಥಾದ್ದು ಅಲ್ಲ. ಇದು ರಾಜ್ಯಗಳಿಗೂ ಅನ್ವಯಿಸುತ್ತದೆ. ರಾಜ್ಯ ಸರಕಾರಗಳು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತವೆ ಅದನ್ನು ತೃಪ್ತಿಕರವಾಗಿ ಜಾರಿಗೆ ತರುವುದಕ್ಕೆ ಆಗುವುದಿಲ್ಲ ಎನ್ನುವುದರ ಮೇಲೆಯೂ ಇದು ಹೊಂದಿಕೊಂಡಿದೆ. ರಾಜ್ಯ ಸರಕಾರಗಳಾಗಲೀ, ಕೇಂದ್ರ ಸರಕಾರವಾಗಲೀ, ಒಂದು ಬೆಲೆಯಂನ್ನು ಏರಿಸಿದರೆ ಅದರ ಪ್ರಭಾವ, ಪರಿಣಾಮ, ಎಲ್ಲರ ಮೇಲೆಯೂ ಇರುತ್ತದೆ. ಕೈಗಾರಿಕೆಗಳ ಮೇಲೆ ವ್ಯಾಪಾರಸ್ಥರ ಮೇಲೆ, ಬಳಕೆದಾರರ ಮೇಲೆ, ಮುಂತಾಗಿ ಎಲ್ಲರಿಗೂ ಇದರ ಪರಿಣಾಮ ಬೀರುತ್ತದೆ. ಇಷ್ಟು ಮಾತ್ರವಲ್ಲ,